ಕೊನೆಯ ಉಸಿರಿನವರೆಗೂ ಪಾಲಿಸಿದರು. 'ದೇಹ ಪೋಷಣೆಗಾಗಿ ಹಸುವಿನ ನೊರೆಹಾಲು ಬೇಕೆಂಬ ಆಸೆ ನನಗಿಲ್ಲ, ದೇವತೆಗಳು ಪಾನಗೈಯುವ ಅಮೃತ ನನಗೆ ಬೇಡ. ಜನ್ಮಭೂಮಿಯೆ, ಭಾರತಮಾತೆಯೆ, ನೀನೇ ನನ್ನ ತಾಯಿ. ನಿನ್ನ ನಾಮಾಮೃತದ ಸವಿಯೇ ನನಗೆ ಇಷ್ಟ. ಶ್ರೀವರಹರಿಯ ದಯೆಯಿಂದ ನಿನ್ನ ಚರಣಕಮಲದ ಸೇವೆ ಮಾಡುವ ಭಾಗ್ಯ ಪಡೆದಿದ್ದೇನೆ. ಯಾವುದೇ ಜಾತಿ– ಧರ್ಮ– ಕೋಮುಗಳ ಬಂಧನ ನನಗಿಲ್ಲ. ನನ್ನ ಪಾಲಿಗೆ ಎಲ್ಲರೂ ಸಮಾನರು, ನನ್ನವರು. ಮುಂದಿನ ಜನ್ಮದಲ್ಲಿ ಬ್ರಾಹ್ಮಣ, ಮಾದಿಗ ಮುಂತಾದ ಭೇದಭಾವವನ್ನು ತಳೆಯದೇ, ನಿನ್ನಂಥ ಭಾರತಮಾತೆಯ ಉದರದಲ್ಲಿ ಜನಿಸುವುದೇ ಪರಮ ಭಾಗ್ಯವೆಂದುಕೊಳ್ಳುತ್ತೇನೆ. ಪರಮಾತ್ಮನು ಮುಂಬರುವ ಪ್ರತಿಯೊಂದು ಜನ್ಮದಲ್ಲಿ ನಿನ್ನ ಶಿಶುವಾಗಿಯೇ ನನ್ನನ್ನು ಹುಟ್ಟಿಸಲಿ. ಸುಟ್ಟು ಕರಕಲಾದ, ಅನ್ಯರು ಉಣ್ಣಲು ನಿರಾಕರಿಸುವಂಥ, ಕಪ್ಪುಬಣ್ಣದ, ಹೊತ್ತಿದ ಅನ್ನವೇ ನನಗಿರಲಿ; ಮಲಗಲು ನೆಲವಿರಲಿ, ತೊಡಲು ಹರಕು-ಚಿಂದೀ ಬಟ್ಟೆಗಳೇ ಸಾಕು; ವಾಸಕ್ಕೆ ಮುರುಕು ಗುಡಿಸಲವೇ ಇರಲಿ; ಹೇ ದೇವರೇ, ಏನಿದ್ದರೂ ಹೇಗಿದ್ದರೂ ಈ ಭರತಭೂಮಿಯಲ್ಲಿ ಇರುವುದೇ ನನಗೆ ಸುಖದ, ಸಂತೃಪ್ತಿಯ ಜೀವನ. ಕರುಣಾಳು ದೇವರೆ, ನನಗೆ ಸಿರಿ-ಸಂಪತ್ತು, ವಿದ್ವಾಂಸರ ಸಭೆಯಲ್ಲಿ ಮಾಡುವ ಸನ್ಮಾನ, ಕೀರ್ತಿ ಇತ್ಯಾದಿ ಯಾವುದರ ಹಂಬಲವೂ ಇಲ್ಲ. ಸದಾಕಾಲವೂ, ಕನಸುಮನಸಿನಲ್ಲಿಯೂ ನನಗೆ ಜನ್ಮ ನೀಡಿದ ಈ ಭೂಮಿಯ ಸ್ಮರಣೆಯೇ ಇರುವಂತಾಗಲಿ. ನನ್ನ ದೇಹ ಯಾವಾಗಲೂ ಈ ತಾಯಿನೆಲದ ಸೇವೆ ಮಾಡುತ್ತಿರಲಿ. ಇದೇ ನನ್ನ ಹಂಬಲ, ಉತ್ಕಟೇಚ್ಛೆ.' ಈ ಗೀತವನ್ನು ಕೇಳಿ 'ನವಬಿಂದು' ಮಿತ್ರರು ದಂಗುಬಡಿದಿದ್ದರಂತೆ.

'ಏನಿತು ಪುಣ್ಯವನು ಮಾಡಿದೆನೊ ನಾನು!/ ಜನಿಸಿದೆನು ನಾನಿಲ್ಲಿ ಭರತಭೂಮಿಯೊಳು!', 'ಇದು ತಪೋನಿಧಿ ಗಾಂಧಿ ಕಲ್ಪಿಸಿದ ಧ್ವಜವು, ಇದು ಭರತಸಂತತಿಯ ಸರ್ವಸ್ವವು!', 'ನನ್ನದಿದು ನನ್ನದೀ ಭರತಭೂಮಿ/ನನ್ನದಿದು ಸತ್ತ್ವ ಸಂಪನ್ನ ಭೂಮಿ// ಅಕಲಂಕ ಮಹಿಮರಪ್ರತಿಮ ತೇಜಸ್ವಿಗಳ/ ಸುಕೃತವಿದ್ಯರ ಭೂಮಿ ದಿವ್ಯಭೂಮಿ/ ಸಕಲ ಕಲೆಗಳ ಭೂಮಿ ಭಾವಿತಾತ್ಮರ ಭೂಮಿ/ ಪ್ರಕೃತಿದೇವತೆಯೊಲಿದು ನಲಿವ ಭೂಮಿ// ದೊರೆತಿರಲು ಜನ್ಮವೆನಗೀ ಪುಣ್ಯಭೂಮಿಯಲಿ/ ಕೊರಗಲೊಲ್ಲೆನು ಮುಕ್ತಿಸುಖವ ಬಯಸಿ/ ಪರಮಾರ್ಥವೆಂಬುದಿನ್ನೊಂದು ಬೇಕೇತಕೋ?/ ಭರತಭೂಮಿಯ ಸೇವೆ ಸಾಲದೇನೋ?' ಎಂದು ನಾಡವರನ್ನು ಹುರಿದುಂಬಿಸುತ್ತಿದ್ದರು. 'ಭಾರತದ ದುರ್ಭಾಗ್ಯವಳಿದುದಿಂದು/ ಭಾರತೀಯರು ಮಾನಧನರಾದರಿಂದು/ ಅರಿತರ್ರೈ ಎನ್ನ ನಾಡವರು ತಾವಾರೆಂದು/ ಪರದಾಸ್ಯದಿಂದದಧಃಪಾತವೆಂದು/ ಪರದಾಸ್ಯದಲ್ಲಿರಲು ತಾವು ಜನಿಸಿಲ್ಲೆಂದು/ ಪರದಾಸ್ಯವದು ನರಕವೆಂದರಿತರಿಂದು//' ಇಂಥ ಅನೇಕ ಪದ್ಯಗಳಲ್ಲಿ ಭಾರತಭೂಮಿ, ಗಾಂಧೀ-ಭಕ್ತಿ, ಕನ್ನಡ ನಾಡು ಮುಂತಾದುವನ್ನು ಕನ್ನಡದ ನುಡಿಯಲ್ಲಿ ಹಾಡಿದ ಸಾಲಿಯವರು ಅಪ್ರತಿಮ ಕವಿಯಾಗಿದ್ದರು.

'ಕನ್ನಡದ ನೆಲದ ಪುಲ್ಲೆನಗೆ ಪಾವನತುಲಸಿ!/ ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ!/ ಕನ್ನಡದ ನೆಲದ ಕಲ್ಲೆನಗೆ ಶಾಲಗ್ರಾಮ ಶಿಲೆ! ಕನ್ನಡಂ ದೈವಮ್ಮೈ!// ಕನ್ನಡದ ಶಬ್ದಮೆನಗೋಂಕಾರಮೀಯೆನ್ನ/ ಕನ್ನಡದ ನುಡಿಯೆ ಗಾಯತ್ರಿಯದ್ಭುತಮಂತ್ರ-/ ಮಿನ್ನಾವುದೈ ಪೆರತು ಕನ್ನಡದ ಸೇವೆಯಿಂದಧಿಕಮೀ ಜಗದೊಳೆನಗೆ?' ಎಂಬ ಸಾಲಿಯವರ ಗೀತ ಪ್ರತಿಯೊಬ್ಬ ದೇಶಭಕ್ತನ, ನಾಡಸೇವಕನ ಅಂತರಂಗದ ಗೀತೆಯಾಗಿತ್ತು. ಕನ್ನಡದ ಮತ್ತು ಗಾಂಧೀಜಿಯ ಇಂಥ ಅಭಿಮಾನದ ಕಾರಣದಿಂದಾಗಿಯೇ ಅವರನ್ನು 'ನಮ್ಮ ಭಾಗದ ಗಾಂಧಿ' ಎಂದೇ ಜನ ಕರೆಯುತ್ತಿದ್ದರು. ಇಂಥ ಭಾರತಭಕ್ತಿ ಮತ್ತು ಜಾತಿ–ಮತ–ವಿದೂರ ಭಾವಗಳೇ ಅವರನ್ನು ಗಾಂಧಿಯಾಗಿಸಿದ್ದುವು. ಅವರ ಸರ್ವಜನಹಿತ, ಮತ್ತು 'ರಾಮಚರಿತವು'ದಂಥ ಮಹಾಕಾವ್ಯಗಳನ್ನು ಅವರ ಕೆಲವು ಖ್ಯಾತ ಸಮಕಾಲೀನರೇ ಅಸೂಯೆಯಿಂದ ಕಾಣತೊಡಗಿದ್ದರಿಂದ, ಅತ್ಯಂತ ಭಾವಜೀವಿಯಾಗಿದ್ದ, ಮೃದು ಸ್ವಭಾವದ ಸಾಲಿಯವರು ಕೆಲಕಾಲ ಕನ್ನಡದಲ್ಲಿ ಬರೆಯುವುದನ್ನೇ ಬಿಟ್ಟಿದ್ದರು, ಬರೆದದ್ದನ್ನು ಪ್ರಕಟಿಸುತ್ತಲೂ ಇರಲಿಲ್ಲ.